**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ** 396/2023

ಹೆಸರುಃ ಮಧು ಪಿ ಬಿ — ಸಿ.ಡಬ್ಲ್ಯೂಃ 14

ವಯಸ್ಸುಃ 41 ವರ್ಷ — ಪಿ.ಡಬ್ಲ್ಯೂಃ 8

ತಂದೆಃ ಬಸವರಾಜಪ್ಪ ಪಿ ಎಂ

ಉದ್ಯೋಗಃ ಪೊಲೀಸ್ ನಿರೀಕ್ಷಕರು, ಮೈಸೂರು

ವಾಸ ಸ್ಥಳಃ ಮೈಸೂರು

ಸಾಕ್ಷಿಗೆ ದಿನಾಂಕಃ 27-10-2025 ರಂದು ಪ್ರಮಾಣ ವಚನ ಬೋಧಿಸಲಾಗಿ ಸಾಕ್ಷಿ ಯ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

ದಿಃ 14-06-2021 ರಿಂದ 07-08-2023 ವರಗೆ ಪೊಲೀಸ್ ನಿರೀಕ್ಷಕನಾಗಿ ಚನ್ನಗಿರಿ ಪೊಲಿಸ್ ಠಾಣೆಯಲ್ಲಿ ಕತರ್ವ್ಯನಿರ್ವಹಿಸಿರುತ್ತೇನೆ.

ದಿಃ 18-07-2021 ರಂದು ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 3 ರವರಿಗೆ ನೋಟೀಸನ್ನು ಜಾರಿ ಮಾಡಿ, ಪಂಚರಾಗಿ ಸಹಕರಿಸಲು ಕೋರಿ ಚಾಸಾ-1 ರವರು ತ ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1 ರಿಂದ 2 ಗಂಟೆಯವರೆಗೂ ಪಂಚನಾಮೆಯನ್ನು ಜರುಗಿಸಿದು, ಅದಕ್ಕೆ ಸದರಿಯವರ ಸಹಿ ಪಡೆದಿರುತ್ತೇನೆ. ಸಾಕ್ಷಿ ಕಡತದಲ್ಲಿನ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಅದರಲ್ಲಿನ ಸಾಕ್ಷ್ಯ ಸಹಿಯನ್ನು 2(ಡಿ) ಎಂದು ನಿಶಾನೆಗೊಳಿಸಲಾಯಿತು.

ನಿಪಿ-2 ರ ಸಮಯಕ್ಕೆ ಒಂದಕು ಭಾವ ಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿ ಸಾಕ್ಷಿ ಕಡತದಲ್ಲಿನ ಸದರಿ ಭಾವಚಿತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ನಿಶಾನೆಗೊಳಿಸಲಾಯಿತು.

ಅದೇ ದಿನ ಆರೋಪಿತರ ಪತ್ತೆಗಾಗಿ ಚಾಸಾ-9 ಮತ್ತು 10 ರವರನ್ನು ನೇಮಿಸಿರುತ್ತೇನೆ.

ದಿಃ 19-07-2021 ರಂದು ರಾತ್ರಿ 8 ಗಂಟೆಗೆ ಬಾತ್ಮಿದಾರರ ಮೇರೆಗೆ ಚನ್ನಗಿರಿ ಟೌನಿನ ಅಜ್ಜಿಹಳ್ಳಿ ಸರ್ಕಲ್ ಬಳಿ ಇದ್ದವರನ್ನು ಚಾಸಾ-9 ಮತ್ತು 10 ರವರನ್ನು

ವಶಕ್ಕೆ ಪಡೆದು ರಾತ್ರಿ 8-30 ಕ್ಕೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಾನು ಸದರಿಯವರನ್ನು ವಿಚಾರಿಸಿದಾಗ ಸದರಿಯವರು ತಮ್ಮ ಹೆಸರನ್ನು ಮಹಮ್ಮದ್ ಸಾಹಿಲ್ ಬಿನ್ ಮಹಮ್ಮದ್ ರಹಮತ್ ವುಲ್ಲಾ, ಮುಸ್ಲಿಂ ಜನಾಂಗ ಬಾರ್ ಬಿಲ್ಡಿಂಗ್ ಕೆಲಸ, ಉಪ್ಪಾರ ಹಟ್ಟಿ, ಚನ್ನಗಿರಿ ನಗರ ಎಂದು ತಿಳಿಸಿದ್ದು ಇನ್ನೊಬ್ಬ ಆರೋಪಿಯಾದ ಮಹಮ್ಮದ್ ಸಲೀಂ ಬಿನ್ ಮಹಬೂಬ್ ಸಾಬ್, 19 ವರ್ಷ ಮುಸ್ಲಿಂ ಜನಾಂಗ ವೆಲ್ಡಿಂಗ್ ಕೆಲಸ, ವಾಸಃ ನೂರಾನಿ ಮಸೀದಿ ಹತ್ತಿರ, ಚನ್ನಗಿರಿ ನಗರ ಎಂದು ತಿಳಿಸಿರುತ್ತಾರೆ. ಸದರಿಯವರು ಪ್ರಸ್ತುತ ಪ್ರಕರಣದ ಕೃತ್ಯವನ್ನು ತಾವೇ ಎಸಗಿರುವುದಾಗಿ ಒಪ್ಪಿಕೊಂಡಿದ್ದು, ಸದರಿಯವರ ಮೇಲೆ ರಾತ್ರಿ 9-30 ಗಂಟೆಗೆ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಸದರಿಯವರರಿಂದ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದಿರುತ್ತೇನೆ. ಸದರಿಯವರು ಸದರಿ ಹೇಳಿಕೆಗಳಲ್ಲಿ ಮೇಲೆ ಹೇಳಿದ ವಿಳಾಸದಲ್ಲಿ ಬಾರ್ ಬಿಲ್ಡಿಂಗ್ ಕೆಲಸ ಮಾಡಿಕೊಂಡಿದ್ದು ತಮ್ಮ ಸಂಬಂದಿಯಾದ 2ನೇ ಆರೋಪಿ ಜೊತೆಯಲ್ೀಲಿ ಕೆಲಸಕ್ಕೆ ಹೋಗಿ ಬರುತ್ತಿದ್ದು ತನ್ನ ಬಳಿ ಕೆಎ-27, ಇಜೆದ3306 ಪಲ್ಸರ್ ಬೈಕ್ ಇದ್ದು, ಲಾಕ್ ಡೌನ್ ಇದ್ದ ಕಾರಣ ಖರ್ಚು ವೆಚ್ಚಕ್ಕಾಗಿ ರಾತ್ರಿ ಸಮಯದಲ್ಲಿ ಯಾರನ್ನಾದರು ಹೆದರಿಸಿ ಅವರ ಬಳಿ ಇರುವ ವಸ್ತುಗಳನ್ನು ಕಿತ್ತುಕೊಳ್ಳೋಅವೆಂದು ಮಾತನಾಡಿಕೊಂಡಿದ್ದು, ದಿಃ 30-06-2021 ರಂದು ತಮ್ಮ ಕೆಲಸವನ್ನು ಮುಗಿಸಿಕೊಂಡು ಈ ಮೋದಲೇ ಯೋಜಿಸಿದಂತೆ ತನ್ನ ಬೈಕನ್ನು 2ನೇ ಆರೋಪಿಗೆ ಚಲಾಯಿಸಲು ಕೊಟ್ಟು ಅದರಲ್ಲಿ 01 ಚಾಕು ವನ್ನು ಸೈಡ್ ಬ್ಯಾಗಿನಲ್ಲಿಟ್ಟುಕೊಂಡು ರಾತ್ರಿ ಸುಮಾರು 11 ಗಂಟೆಗೆ ಅಗರಬನ್ನಿಹಟ್ಟಿಗೆ ಹೋಗಿ ಚನ್ನಗಿರಿ ಬೀರೂರು ರಸ್ತೆಯಿಂದ ಯಾರಾದರೂ ಬರುತ್ತಾರೆ ಎಂದು ಗಮನಿಸುತ್ತಿದ್ದಾಗ ಸದರಿ ರಸ್ತೆಯ ಕಡೆಯಿಂದ ಮೋಟಾರ್ ಬೈಕಿನಲ್ಲಿ ಬುರತ್ತಿದ್ದ ಒಬ್ಬ ಆಸಾಮಿಯನ್ನು ತಡೆದು ನಿಲ್ಲಿಸಿ ವಿಳಾಸ ಕೇಳುವ ನೆಪದಲ್ಲಿ ಮಾತನಾಡುತ್ತಿದ್ದಾಗ ನಾನು ಬೈಕಿನಿಂದ ಇಳಿದು, ಬೈಕಿನಲ್ಲಿದ್ದ ಚಾಕುವನ್ನು ಆತನಿಗೆ ತೋರಿಸಿ ಹೆದರಿಸಿ ನಿನ್ನ ಬಳಿ ಇರುವ ವಸ್ತುಗಳನ್ನು ಕೊಡು ಇಲ್ಲದಿದ್ದರೆ ಚುಚ್ಚಿ ಸಾಯಿಸುತ್ತೇನೆ ಎಂದು ಬೆದರಿಸಿದ್ದು, ಅತನ ತನ್ನ ಹತ್ತಿರ ದುಡ್ಡು ಬಂಗಾರ ಏನು ಇಲ್ಲವೆಂದು ತಿಳಿಸಿದ್ದು, ಮೊಬೈಲಸ್ ಇರುವುದಾಗಿ ತಿಳಿಸಿದ್ದು 2ನೇ ಆರೊಪಿ ಬೈಕಿನಿಂದ ಇಳಿದು ಆತನ ಜೇಬಿಗೆ ಕೈ ಹಾಕಿಮೊಬೈಲ್ ಮತ್ತು ಹೆಡ್ ಫೋನ್ ಕಿತ್ತು ಕೊಂಡಿರುವುದಾಗಿ ನಂತರ ಆತನನ್ನು ಮನೆ ಕಡೆ ಹೋಗಿದ್ದಾಗಿ ನಂತರ 2ನೇ ಆರೋಪಿಯನ್ನು ಆತನ ಮನೆ ಬಳಿ ಬಿಟ್ಟು ಹೋರುವುದಾಗಿ ನಂತರ ಈ ಮೊಬೈಲನ್ನು ತನ್ನ ತಂದೆಯಾದ ಚಾಸಾ-8 ರವರಿಗೆ ನೀಡಿರುವುದಾಗಿ ಹೇಳಿಕೆ ನೀಡಿರುತ್ತಾನೆ. ಸಾಕ್ಕಿ ಕಡತದಲ್ಲಿನ ಸದರಿ 2 ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು, ಅವನ್ನು ಕ್ರಮವಾಗಿ ಈಗಾಗಲೇ ನಿಪಿ-11 ಮತ್ತು 12 ಎಂದು, ಅವುಗಳಲ್ಲಿನ ಅದರಲ್ಲಿನ ಸಾಕ್ಷ್ಯ ಸಹಿಯನ್ನು ನಿಪಿ-11(ಎ ) ಮತ್ತು 12(ಎ) ಎಂದು ನಿಶಾನೆಗೊಳಿಸಲಾಯಿತು.

ಸದರಿ ನಿಪಿ-11 ರಲ್ಲಿ 1 ಮತ್ತು 2ನೇ ಆರೋಪಿ ನೀವು ನನ್ನನ್ನು ಕಡೆದುಕೊಂಡು ಹೋದರೆ ಮೊಬೈಲನ್ನು ಕಿತ್ತುಕೂಂಡ ಸ್ಥಳ ಮತ್ತು ಸದರಿ ಮೊಬೈಲ್ ಮತ್ತು ಇಯರ್ ಫೋನನ್ನು ತೋರಿಸಿ ಹಾಜರುಪಡಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ.

1 ಮತ್ತು 2ನೇ ಆರೋಪಿತರು ತನ್ನ ಸ್ವ ಇಚ್ಛಾ ಹೇಳಿಕೆಗಳಿಗೆ ಅವರ ಸಹಿಯನ್ನು ಪಡೆದಿರುತ್ತೇನೆ.

ದಿಃ 20-07-2021 ರಂದು ಚಾಸಾ-4 ಮತ್ತು 5 ರವರಿಗೆ ೋಟೀಸನ್ನು ಜಾರಿ ಮಾಡಿ ತನಿಖೆಗೆ ಸಹಕರಿಸುವಂತೆ ಕೋರಿದ್ದು, ಸದರಿಯವರು ಒಪ್ಪಿ ಠಾಣೆಗೆ ಹಾಜರಾಗಿ ತಮ್ಮ ವಶದಲ್ಲಿದ್ದ 1 ಮತ್ತು 2ನೇ ಆರೋಪಿತರನ್ನು ಪರಿಚಯಿಸಿ, ಸದರಿಯವರು ಎಲ್ಲಿಗೆ ಕರೆದುಕೊಂಡು ಹೋಗಿ ಏನನ್ನು ತೋರಿಸಿ ಹಾಜರುಪಡಿಸಿರುತ್ತಾರೋ, ತನಿಖೆಗೆ ಸಹಕರಿಸಲು ಕೋರಿರುತ್ತೇನೆ. ನಂತರ ಸದರಿಯವರೊಂದಿಗೆ ಇಲಾಖಾ ವಾಹನದಲ್ಲಿ ಆರೋಪಿತರು ಕೃತ್ಯ ನಡೆದ ಸ್ಥಳದ ಅಗರಬನ್ನಿಹಟ್ಟಿ ರಸ್ತೆಯ ಹಿಂಭಾಗದಲ್ಲಿ ನಿಲ್ಲಿಸಿ ಸದರಿ ಆರೋಪಿತರು ಮುಂದೆ - ಮುಂದೆ ಹೋಗಿ ಸದರಿ ರಸ್ತೆಯಲ್ಲಿ ನಿಂತು ಇದೇ ಜಾಗದಲ್ಲಿ ಚಾಸಾ-1 ರವರಿಂದ ಮೊಬೈಲ್ ಫೋನ್ ಮತ್ತು ಇಯರ್ ಫೋನ್ ಅನ್ನು ಕಿತ್ತು ಕೊಂಡಿರುವುದಾಗಿ, ತೋರಿಸಿರುತ್ತಾರೆ. ಸದರಿ ಜಾಗವು ಶಾಮೀರ್ ಜಾನ್ ರವರ ಮನೆಯ ಮುಂದೆ ಹಾದು ಹೋಗಿರುವ ಅಗರಬನ್ನಿಹಟ್ಟಿ ಮತ್ತು ಕಗತೂರು ಟಾರ್ ರಸ್ತೆ ಆಗಿದ್ದು, ಸದರಿ ಸ್ಥಳದಲ್ಲಿ ಬೆಳಿಗ್ಗೆ 9 ರಿಂದ 9-30 ರವರೆಗೂ ಜರುಗಿಸಿದು, ಸದರ ಪಂಚನಾಮೆಗೆ ಆರೋಪಿತರು ಮತ್ತು ಪಂಚರ ಮತ್ತು ಸಿಬ್ಬಂದಿಯವರ ಸಹಿ ಪಡೆದಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-4 ಎಂದು, ಅದನ್ನು ನಿಪಿ-4(ಸಿ) ಎಂದು ಅ ಎಂದು ನಿಶಾನೆಗೊಳಿಸಲಾಯಿತು. ಸದರಿ ನಿಪಿ-4 ರ ಸಮಯಕ್ಕೆ ಒಂದು ಭಾವ ಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿ ಕಡತದಲ್ಲಿನ ಸದರಿ ಭಾವ ಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-5 ಎಂದು,ನಿಶಾನೆಗೊಳಿಸಿದೆ. ನಂತರ ಠಾಣೆಗೆ ಹಾಜರಾಗಿ 1ನೇ ಆರೋಪಿ ತಾನು ಕದ್ದ ಮೊಬೈಲ್ ಮತ್ತು ಬೈಕನ್ನು ಮನೆಯಲಿಟ್ಟಿದ್ದು, ಅದನ್ನು ಕರೆದುಕೊಂಡು ಹೋದರೆ ಹಾಜರು ಪಡಿಸುವುದಾಗಿ ಚಾಸಾ-4 ಮತ್ತು 5 ರವರಿಗೆ ನೋಟೀಸನ್ನು ಜಾರಿ ಮಾಡಿ ಸದರಿ ಆರೋಪಿ, ಪಂಚರು ಮತ್ತು ಸಿಬ್ಬಂದಿಯೊಂದಿಗೆ ಇಲಾಖಾ ವಾಹನದಲ್ಲಿ ಹೂರಟು ಗದ್ದಿಗೆ ಮಠದ ಮನೆಯ ಹತ್ತಿರ ಹೋಗಿ ಜೀಪನ್ನು

ನಿಲ್ಲಿಸಲು ಆರೋಪಿ ತಿಳಿಸಿದ್ದು, ನಂತರ ಆರೋಪಿ ಜೀಪಿನಿಂದ ಇಳಿದು ಒಂದು ಮನೆಯನ್ನು ತೋರಿಸಿ ಸದರಿ ಮನೆ ತನ್ನ ವಾಸದ ಮನೆ ಎಂದು ತೋರಿಸಿದು, ತನ್ನ ತಂದೆ/ಚಾಸಾ-8 ಹತ್ತಿರ ಇದ್ದ ರೆಡ್ ಮಿ ಮೆಬೈಲನ್ನು ಹಾಜರುಪಡಿಸಿದ್ದು, ಸದರಿ ಮೊಬೈಲನ್ನು ಪರಿಶೀಲಿಸಿದಾಗ ಸದರಿ ಮೊಬೈಲ್ ರೆಡ್ ಮಿ ನೋಟ್ ಫ್ರೋ-6 ಆಗಿರುತ್ತದೆ. ನಂತರ ಅದರ ಹಿಂಭಾಗವನ್ನು ಬಿಚ್ಚಿ ನೋಡಲಾಗಿ ಸದರಿ ಮೊಬೈಲ್ನ ಐ ಎಂ ವಿ ಸಂಃ 863309048631817 ಹಾಗೂ 863309048631825 ನಂತರ ಸದರಿ ವೈಬೈಲನ್ನು ಸ್ವಿಚ್ ಆಫ್ ಮಾಡಲಾಗಿರುತ್ತದೆ. ನಂತರ ಸದರಿ ಆರೋಪಿ ಗೋಡೆಗೆ ನೇತು ಹಾಕಿದ ಇಯರ್ ಫೋನ್ ಅನ್ನು ಹಾಜರುಪಡಿಸಿದ್ದು, ಅದು ಬೋಟ್ ಕಂಪನಿಯ ಇಯರ್ ಫೋನ್ ಆಗಿದ್ದು, ನಂತರ ಮನೆಯ ಹೊರಗಿದ್ದ ಪಲ್ಸರ್ ಬೈಕನ್ನು ತೋರಿಸಿ ಇದೇ ಬೈಕನ್ನು ಕೃತ್ಯಕ್ಕೆ ಬಳಸಿದ್ದು ಎಂದು ನೋಡಲಾಗಿ, ಅದನ್ನು ಕೆ ಎ 27 ಇ ಜೆ 3306 ಪಲ್ಸರ ಬೈಕ್ ಆಗಿರುತ್ತದೆ. ನಂತರ ಸದರಿ ಬೈಕ್ನ ಸೈಡ ್ ಬ್ಯಾಗಿನಲ್ಲಿದ್ದ ಚಾಕುವನ್ನು ತೋರಿಸಿದ್ದು ಸದರಿ ಚಾಕುವಿನಿಂದಲೇ ಚಾಸಾ-1 ರವರನ್ನುಹೆದರಿಸಿ ಮೊಬೈಲ್ ಮತ್ತು ಇಯರ್ ಫೋನ್ ಅನ್ನು ಕಿತ್ತುಕೊಂಡಿರುವುದರಿ ತಿಳಿಸಿರುತ್ತಾರೆ. ಸದರಿ ಚಾಕುವನ್ನು ಪರಿ ಶೀಲಿರುವುದಾಗಿ ಅದು ಕಪ್ಪು ಬಣ್ಣದ ಪ್ಲಾಸ್ಟಿಕ್ ಹಿಡಿ ಇರುವ ಸ್ಟೀಲ್ ಚಾಕು ಆರಿದ್ದು, ಮುಂಭಾಗ ಹರಿತವಾಗಿರುತ್ತದೆ. ಸದರಿ ಮಹಜರನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೂ ಜರುಗಿಸಿ ಅದಕ್ಕೆ ಸದರಿಯವರ ಸಹಿಗಳನ್ನು ಪಡೆದು, ಸದರಿ ವಸ್ತುಗಳನ್ನು ಮುಂದಿನ ತನನಿಖೆಗಾಗಿ ವಶಕ್ಕೆ ಪಡೆದಿರುತ್ತೇನೆ. ಸದರಿ ಸಮಯಕ್ಕೆ ಭಾವ ಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿ ಕಡತದಲ್ಲಿನ ಪಂಚನಾಮೆ ಮತ್ತು ಭಾಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-8 ರಿಂದ 10 ನಿಶಾನೆಗೊಳಿಸಿದ್ದು ಅದರಲ್ಲಿನ ಸಾಕ್ಷ್ಯ ಸಹಿಯನ್ನು 8(ಬಿ) ಎಂ ನಿಶಾನೆಗೊಳಿಸಲಾಯಿತು. ನಂತರ ಠಾಣೆಗೆ ಹಾಜರಾಗಿ ವಶಕ್ಕೆ ಪಡೆದ ವಸ್ತುಗಳನ್ನು ಪಿ ಎಫ್ ನಂಃ106/ಎ/2021 ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಮೊಬೈಲ್ ಇಯರ್ ಫೋನ್ ಅನ್ನುಚಾಸಾ-1 ರವರು ಈಗಾಗಲೇ ಮಧ್ಯಂತರ ವಶಕ್ಕೆ ಪಡೆದಿರುತ್ತಾರೆ. ಅವನ್ನು ಮು ಮಾ 2 ಮತ್ತು 3 ಎಂದು ನಿಶಾನೆಗೊಳಿಸಿದೆ. ಸದರಿ ಚಾಕುವನ್ನು ಈಗಾಗಲೇ ಮು ಮಾ-1 ಎಂದು ನಿಶಾನೆಗೊಳಿಸಿದೆ. ಬೈಕನ್ನು 1ನೇ ಆರೋಪಿ ನ್ಯಾಯಾಲಯದಿಂದ ತನ್ನ ಮಧ್ಯಂತರ ವಶಕ್ಕೆ ಪಡೆದಿರುತ್ತಾರೆ.

ನಂತರ ಸದರಿ ಆರೋಪಿತರ ಮೇಲೆ ದಸ್ತರಿ ಕ್ರಮ ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ನಂತರ ಅದೇ ದಿನ ಚಾಸಾ-1 ರವರ ಮುಂದುವರೆದ ಹೇಳಿಕೆ ಚಾಸಾ-8 ರಿಂದ 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 22-07-2021 ರಂದು ಚಾಸಾ-13 ರವರಿಗೆ ಭಾ ಸಾ. ಅ. ಕಲಂ 65(ಬಿ) ರ ಅಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅವಳಡಿಸಿರುತ್ತೇನೆ. ಸದರ ಪ್ರಮಾಣ ಪತ್ರವನ್ನು ನಿಪಿ-13 ಎಂದು ಅದರಲ್ಲಿನ ಸಾಕ್ಷ್ಯ ಸಹಿಯನ್ನು 13(ಎ) ಎಂದು ನಿಶಾನೆಗೊಳಿಸಲಾಯಿತು.

ದಿಃ 15-09-2021 ರಂದು ಮಾನ್ಯ ನ್ಯಾಯಾಲಯದಿಂದ 1ನೇ ಆರೋಪಿ ನ್ಯಾಯಾಯದ ಆದೇಶವನ್ನು ಪಡೆದು ವಾಹನ ಬಿಡುಗಡೆಗಾಗಿ ಠಾಣೆಗೆ ಹಾಜರಾಗಿದ್ದು ಚಾಸಾ-6 ಮತ್ತು 7 ರವರ ಸಮಕ್ಷಮ ಸಂಜೆ 7 ರಿಂದ 7-30 ರವರೆಗೂ ಪಂಚನಾಮೆಯನ್ನು ಜರುಗಿಸಿ ವಾಹನ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿ ಕಡತದಲ್ಲಿನ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ- 6 ಎಂದು ಅದರಲ್ಲಿನ ಸಾಕ್ಷ್ಯ ಸಹಿಯನ್ನು 6(ಸಿ) ಎಂದು ನಿಶಾನೆಗೊಳಿಸಲಾಯಿತು.

ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ, ರೋಪಟ್ಟೆಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ನಾನು ಯಾವುದೇ ಪಂಚನಾಮೆಯನ್ನು ಜರುಗಿಸದೇ ನಿಪಿ-2, 4, 6, 8 ಅನ್ನು ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3, 5, 9 ಮತ್ತು 10 ರಲ್ಲಿ ಲ್ಯಾಪ್ಪ ಟಾಪ್ ಮಾತ್ರ ಕಾಣಿಸುತ್ತಿದ್ದು, ಯಾವುದೇ ಪ್ರಿಂಟರ್ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿ ಸದರಿ ಪ್ರಿಂಟರ್ ವಾಹನದಲ್ಲಿದೆ ಎಂದು ನುಡಿಯುತ್ತಾರೆ. ಸದರಿ ನಿಪಿ-2, 4, 6, 8 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಿಪಿ-11 ಮತ್ತು 12 ಅನ್ನು ಅರೋಪಿತರರಿಂದ ನಾನೇ ನನ್ನ ತನಿಖೆಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ . ಮು ಮಾ 1 ರಿಂದ 3 ಅನ್ನು ಆರೋಪಿತರಿಂದ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ . ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸುಳ್ಳು

ದೊ. ಪಟ್ಟಿಯನ್ನು ದಾಖಲಿಸಿದ್ದೇನೆ ಎಂದರೆ  ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**